ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂಖ್ಯೆ: 19958 ಡಿಎಂಎ 22 ಡಿಎಂಎಎಸ್‌ಸಿ 2017-18 ದಿನಾಂಕ: 07.04.2020

# ಸುತ್ತೋಲೆ

ವಿಷಯ: ನಗರ ಸ್ಥಳೀಯ ಸಂಸ್ಥೆಗಳು ವಿಧಿಸುವ ಆಸ್ತಿ ತೆರಿಗೆ ಮೇಲಿನ ಶೇ.5 ರ ರಿಯಾಯಿತಿಯ ಕಾಲಾವಧಿಯನ್ನು ವಿಸ್ತರಿಸುವುದರ ಬಗ್ಗೆ.

ಉಲ್ಲೇಖ 1) ನಗರ ಸ್ಥಳೀಯ ಸಂಸ್ಥೆಗಳಿಂದ ಆಸ್ತಿ ತೆರಿಗೆ ಮೇಲಿನ ಶೇ.5ರ ರಿಯಾಯಿತಿಯ ಕಾಲಾವಧಿಯನ್ನು ವಿಸ್ತರಿಸಲು ಕೋರಿ ಸ್ವೀಕೃತಗೊಂಡ ಮನವಿಗಳು.

2) ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮ 1976ರ ಕಲಂ 112 (ಎ)(1).

3) ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ 105(1).

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರಲ್ಲಿ ಹಲವಾರು ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆ ಮೇಲೆ ಒದಗಿಸಲಾಗುವ ಶೇ 5ರ ರಿಯಾಯಿತಿಯ ಕಾಲಾವಧಿಯನ್ನು ಏಪ್ರಿಲ್ ಮಾಹೆಗೆ ಮಾತ್ರ ಸೀಮಿತಗೊಳಿಸದೆ ಮೇ 31ರವರೆಗೂ ವಿಸ್ತರಿಸುವಂತೆ ಕೋರಿರುತ್ತಾರೆ. ದೇಶಾದ್ಯಂತ ಕೊರೋನಾ/ ಕೋವಿಡ್ 19 ಸೋಂಕು ನಿಯಂತ್ರಣಕ್ಕಾಗಿ ಏಪ್ರಿಲ್ 14, 2020 ರವರೆವಿಗೂ ನಿಷೇದಾಜ್ಞೆ/ ಲಾಕ್‌ಡೌನ್ ಜಾರಿಯಲ್ಲಿದ್ದು, ಪರಿಸ್ಥಿತಿಯು ಗಂಭೀರವಾಗಿರುತ್ತದೆ. ಸಾರ್ವಜನಿಕರು ಯಾವುದೇ ಸಂದರ್ಭದಲ್ಲಿಯೂ ಅನಗತ್ಯವಾಗಿ ಹೊರಬಾರದಂತೆ ಮತ್ತು ಸಾಮಾಜಿಕ ಅಂತರ ಕಾಯ್ದುಕೊಳ್ಳುವಂತೆ ಸರ್ಕಾರದಿಂದ ಕಟ್ಟುನಿಟ್ಟಿನ ಆಜ್ಞೆ ವಿಧಿಸಲಾಗಿರುತ್ತದೆ.

ಮುಂದುವರೆದು ಪ್ರತಿ ಸಾಲಿನಂತೆ ಪೌರಸಭೆಗಳ ಕಾಯ್ದೆಯನ್ವಯ ಆರ್ಥಿಕ ವರ್ಷದ ಆರಂಭದಲ್ಲೇ ಸಾರ್ವಜನಿಕರು ನಗರ ಸ್ಥಳೀಯ ಸಂಸ್ಥೆಗಳಿಗೆ ಆಸ್ತಿ ತೆರಿಗೆ ಭರಿಸಬೇಕಾಗಿರುತ್ತದೆ ಮತ್ತು ಆರ್ಥಿಕ ವರ್ಷದ ಮೊದಲನೇ ಮಾಹೆಯಲ್ಲಿ (ಏಪ್ರಿಲ್ 30ರೊಳಗೆ) ಆಸ್ತಿ ತೆರಿಗೆ ಸಂದಾಯ ಮಾಡುವ ನಾಗರೀಕರಿಗೆ ಉಲ್ಲೇಖ(2) & (3)ರಂತೆ ಶೇ5ರ ರಿಯಾಯಿತಿಯ ಸೌಲಭ್ಯ ಲಭ್ಯವಿರುತ್ತದೆ. ಈ ಹಿನ್ನಲೆಯಲ್ಲಿ ಏಪ್ರಿಲ್ ಮಾಹೆಯಲ್ಲಿ ಆಸ್ತಿ ತೆರಿಗೆ ಸಂದಾಯ ಮಾಡಲು ಹೆಚ್ಚಿನ ಜನಸಂದಣಿಯಾಗಲಿದ್ದು ಪ್ರಸ್ತುತ ಸಂದರ್ಭಕ್ಕೆ ಅನಪೇಕ್ಷಿತವಾಗಿದೆ. ಹಾಗಾಗಿ ಸಾರ್ವಜನಿಕರು ಏಪ್ರಿಲ್ ಮಾಹೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ/ ಬ್ಯಾಂಕ್‌ಗಳಿಗೆ ದೌಡಾಯಿಸುವುದನ್ನು ಮಿತಿಗೊಳಿಸಲು ಅನುವಾಗುವಂತೆ ಆಸ್ತಿತೆರಿಗೆ ಮೇಲಿನ ಶೇ 5 ರ ರಿಯಾಯಿತಿಯ ಕಾಲಾವಧಿಯನ್ನು 1 ಏಪ್ರಿಲ್ 2020 ರಿಂದ 31 ಮೇ 2020ರವರೆಗೆ ವಿಸ್ತರಿಸುವುದು ಅತ್ಯಗತ್ಯ ಮತ್ತು ಸಮಯೋಚಿತವಾಗಿರುತ್ತದೆ ಎಂದು ಅಭಿಪ್ರಾಯಿಸಲಾಗಿರುತ್ತದೆ.

Scanned with CamScanner

ಈ ಸಂಬಂಧ ಪರಿಶೀಲಿಸಲಾಗಿ, ಉಲ್ಲೇಖ (2) & (3)ರಲ್ಲಿನ ಕಲಂಗಳಿಗೆ ಅಗತ್ಯ ತಿದ್ದುಪಡಿ ತರುವ ಮೂಲಕ ಆಸ್ತಿ ತೆರಿಗೆ ಮೇಲಿನ ಶೇ 5 ರ ರಿಯಾಯಿತಿಯ ಸೌಲಭ್ಯವನ್ನು 1 ಏಪ್ರಿಲ್ 2020 ರಿಂದ 31ಮೇ 2020 ರವರೆಗೆ ವಿಸ್ತರಿಸಲು ಸಾಧ್ಯವಿದ್ದು ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಜರುಗಿಸಲಾಗುತ್ತಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು (ಬಿ.ಬಿ.ಎಂ.ಪಿ ಹೊರತುಪಡಿಸಿ) ಆರ್ಥಿಕ ವರ್ಷ 2020-21ನೇ ಸಾಲಿಗೆ ಮಾತ್ರ ಅನ್ವಯಿಸುವಂತೆ ಆಸ್ತಿ ತೆರಿಗೆ ಮೇಲಿನ ಶೇ 5 ರ ರಿಯಾಯಿತಿಯ ಸೌಲಭ್ಯದ ಕಾಲಾವಧಿಯನ್ನು 1 ಏಪ್ರಿಲ್ 2020 ರಿಂದ 31 ಮೇ 2020ರವರೆಗೆ ವಿಸ್ತರಿಸಿ ಸಾರ್ವಜನಿಕರಿಗೆ ಆಸ್ತಿ ತೆರಿಗೆ ಪಾವತಿಸಲು ಅನುವು ಮಾಡಿಕೊಡಲು ಕ್ರಮವಹಿಸುವುಂತೆ ಸೂಚಿಸಲಾಗಿದೆ.

20.20.04.20

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು

ಪ್ರತಿಯನ್ನು ಕ್ರಮಕ್ಕಾಗಿ:

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ.
2. ರಾಜ್ಯದ ಎಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ.
3. ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು/ ಪೌರಾಯುಕ್ತರು/ ಮುಖ್ಯಾಧಿಕಾರಿಗಳು.
4. ಜಂಟಿ ನಿರ್ದೇಶಕರು (ಸುಧಾರಣೆ), ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ, ಬೆಂಗಳೂರು ರವರಿಗೆ Property tax calculator ತಂತ್ರಾಂಶದಲ್ಲಿ ಅಗತ್ಯ ಮಾರ್ಪಾಡಿಗೆ ಕ್ರಮವಹಿಸಲು.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು- ಮಾಹಿತಿಗಾಗಿ ಸಲ್ಲಿಸಿದೆ.
2. ಜಂಟಿ ನಿರ್ದೇಶಕರು(ಯೋಜನೆ), ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.

Scanned with CamScanner